ತೆಗೆದಿಲ್ಲ. ಇವತ್ತು ಕೆರೆಯಲ್ಲಿ ನೀರು ನಿಲ್ಲದೆ ಹೋದರೆ ಬೋರ್‌ವೆಲ್‌ಗಳಲ್ಲಿ ನೀರು ಬರುವುದಿಲ್ಲ. ಹೂಳನ್ನು ತೆಗೆಯಲಿಕ್ಕೆ ಯಾವುದೋ ಒಂದು ಪೊಕ್ಲೈಂಡ್ ಟೈಪ್ ಮಿಷನ್ ತರುತ್ತೇವೆಂದು ಹೇಳಿದಿರ, ದಯವಿಟ್ಟು ಆಧುನಿಕ ಮಿಷನರಿಗಳನ್ನು ತಂದು ಶೀಘ್ರವಾಗಿ ಕೆರೆಯ ಹೂಳೆತ್ತತಕ್ಕ ಕೆಲಸವನ್ನು ತಾವು ಮಾಡಬೇಕು. ಕೆರೆಯೆ ಹೂಳನ್ನು ಎತ್ತಿಸುವುದರ ಜೊತೆಗೆ ಚಾನಲ್‌ಗಳ ಹೂಳನ್ನು ಸಹ ತೆಗೆಸಬೇಕು. ನನ್ನ ತಾಲ್ಲೂಕಿನಲ್ಲಿ ಪೋಳಾರಿ ಕೆರೆ ಅಂತ ಇದೆ. ಪೋಳಾರಿ ಕೆರೆಯಿಂದ ಸುಮಾರು 800 ಎಕರೆ ಗದ್ದೆ ನೀರಾವರಿಯಾಗುತ್ತದೆ. ಆದರೆ ಇವತ್ತು ಆ ನೀರಾವರಿಯಾಗುವುದೆಲ್ಲಾ ತಪ್ಪಿಹೋಗಿದೆ. ಕೇವಲ 2-3 ಲಕ್ಷ ರೂಪಾಯಿ ಕೊಟ್ಟು ಚಾನಲ್ ರಿಪೇರಿ ಮಾಡಿಸಬೇಕು. ತಮ್ಮ ಉತ್ತರದಲ್ಲಿ ನಮ್ಮ ಪೋಳಾರಿ ಕೆರೆ ಮತ್ತು ವಿ.ಸಿ.ಚಾನಲ್ ನಾಗಮಂಗಲ ತಾಲ್ಲೂಕಿಗೆ ಬರತಕ್ಕದ್ದರ ಬಗ್ಗೆ ನೀವು ಶೀಘ್ರವಾಗಿ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ.

ಪ್ರಕಟಣೆ

ಉಪಾಧ್ಯಕ್ಷಿಣಿಯವರು:- ಈಗ ಚರ್ಚೆ ಮುಗಿದಿದೆ. ಮೇಲ್ಮನೆಯಿಂದ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ115ರ ಮೇರೆಗೆ " ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕದ ಪರಿಶೀಲನಾ ಪ್ರಸ್ತಾವನ್ನು ವಿಧಾನ ಪರಿಷತ್ತಿನಲ್ಲಿ ದಿನಾಂಕ: 25-3-92 ರಂದು ತಿರಸ್ಕರಿಸಲಾಯಿತೆಂದು ತಿಳಿಸುತ್ತೇನೆ. "ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕ್ ಪಂಚಾಯತಿಯ ಸಮಿತಿಗಳು ಮಂಡಲ್ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ತಿದ್ದುಪಡಿ ವಿಧೇಯಕ 1992

"1992-93ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಗೆ ಮಂತ್ರಿಗಳಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ(ಲೋಕೋಪಯೋಗಿ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೆ, 43,44,45ನೇ ಬೇಡಿಕೆಗಳ ಮೇಲೆ ಸಾಕಷ್ಟು ಜನ ಮಾನ್ಯ ಶಾಸಕರು ಮಾತನಾಡಿದ್ದಾರೆ. ಸೂಚನೆಗಳನ್ನು ಕೊಟ್ಟಿದ್ದಾರೆ ಹಾಗೂ ಸಲಹೆಗಳನ್ನೂ ಕೊಟ್ಟಿದ್ದಾರೆ. ಮೊದಲನೆಯದಾಗಿ ಮಾನ್ಯ ರಾಮಸ್ವಾಮಿಯವರು ಇಂಜಿನಿಯರ್‌ಗಳ ಹಂತದಲ್ಲಿ ಬಹಳ ಭ್ರಷ್ಟಾಚಾರ ಆಗುತ್ತಿದೆ ಹಾಗೂ ಅವರು ಕೆಲಸ ಚೆನ್ನಾಗಿ ಮಾಡುತ್ತಿಲ್ಲವೆಂದು ಹೇಳಿ ಅದೇ ಹಳ್ಳಿಗಾಡಿನಲ್ಲಿರತಕ್ಕ ರೈತರು ಇಂಜಿನಿಯರ್‌ಗಳ ಸಹಾಯವಿಲ್ಲದೆ ಕಟ್ಟಿರುವ ಮನೆಗಳು ಸುಮಾರು 200 ವರ್ಷಗಳಿಂದ ಚೆನ್ನಾಗಿವೆ ಎಂದು ಹೇಳಿದ್ದಾರೆ. ಆದರೆ ಹಳ್ಳಿಗಾಡಿನಲ್ಲಿ ಮಣ್ಣಿನಲ್ಲಿ ಕಟ್ಟಿರತಕ್ಕ ಮನೆಗಳು 200 ವರ್ಷವೇನೂ ಬಾಳಿಕೆ ಬರುತ್ತಿಲ್ಲ. ಈ ವರ್ಷ ಸಾಕಷ್ಟು ಮಳೆ ಜಾಸ್ತಿ ಬಂದು ಎಷ್ಟೋ ಮನೆಗಳು ಬಿದ್ದುಹೋಗಿವೆ. ನಮ್ಮ ಇಂಜಿನಿಯರ್‌ಗಳು ಸಹ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಒಳ್ಳೆಯ ಕೆಲಸವನ್ನು ಮಾಡಿದವರನ್ನು ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಹೇಳಬೇಕು. ಕೆಟ್ಟ ಕೆಲಸವನ್ನು ಮಾಡಿದವರಿಗೆ ಕೆಟ್ಟ ಕೆಲಸ ಮಾಡಿದ್ದಾರೆಂದು ಹೇಳಿದರೂ ತಪ್ಪಾಗಲಾರದು ಎನ್ನುವುದೇ ನನ್ನ ಭಾವನೆಯಾಗಿದೆ. ನಿಮಗೆ ಗೊತ್ತಿರುವ ಹಾಗೆ ನಮ್ಮ ಇಂಜಿನಿಯರ್‌ಗಳು ಬಹಳ ಒಳ್ಳೆಯ ಕಟ್ಟಡಗಳನ್ನು ಕಟ್ಟಿದ್ದಾರೆ. ವಿಧಾನಸೌಧವನ್ನು ಕಟ್ಟಿದ್ದಾರೆ, ಸೂಪಾ ಅಣೆಕಟ್ಟನ್ನು ಕಟ್ಟಿದ್ದಾರೆ, ಹೀಗೆ ಸಾಕಷ್ಟು ಒಳ್ಳೆಯ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಅದರಲ್ಲಿ ಏನೂ ಅನುಮಾನವಿಲ್ಲ. ಮತ್ತು ಅವರ ವಿಷಯದಲ್ಲಿ ಏನೂ ಎನ್‌ಕ್ವೈರಿ ಮಾಡಿಲ್ಲ, ಶಿಕ್ಷೆ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಸುಮಾರು 39 ಜನರ ಮೇಲೆ ತನಿಖೆ ನಡೆಸಿ, ಅವರಲ್ಲಿ ಕೆಲವು ಜನರ ಮೇಲಿನ ಆಪಾದನೆಗಳನ್ನು ಲೋಕಾಯುಕ್ತಕ್ಕೆ ಕಳುಹಿಸಿದ್ದೇವೆ. ಮತ್ತು ಅವರಿಗೆ ಶಿಕ್ಷೆ ಕೂಡ ಕೊಟ್ಟಿದ್ದೇವೆ. ಅವರಿಗೆ ಯಾವುದೇ ತರಹದ ರಿಯಾಯಿತಿ ಕೊಟ್ಟಿಲ್ಲ. ತಪ್ಪು ಮಾಡಿದಂತಹವರಿಗೆ ಶಿಕ್ಷೆ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿತ್ತಿದೆ. ಮತ್ತೆ ಕ್ವಾಲಿಟಿ ಕಂಟ್ರೋಲ್ ವಿಷಯದಲ್ಲೂ ಕೂಡ ಅವರು